of submergeable lands is under examination.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಕೆರೆಯ ಅಂದಾಜು ಸರ್ಕಾರದಿಂದ ಮಂಜೂರಾದದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಕೆರೆಯ ಹಿಂಭಾಗದಲ್ಲಿರುವ ಅಚ್ಚುಕಟ್ಟೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ನೋಟೀಸ್ ಬೇಕು.

ಶ್ರೀ ಎಸ್. ಎಂ. ಲಿಂಗಪ್ಪ.—ಮುಳುಗಡೆಯಾಗತಕ್ಕ ಜಮೀನಿಗೆ ಕೊಡತಕ್ಕ ಪರಿಹಾರ ಸಾಮಾನ್ಯವಾಗಿ ಮೂಲ ಅಂದಾಜಿನಲ್ಲಿ ಸೇರಿರುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿರುತ್ತದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಹಾಗಿದ್ದ ಪಕ್ಷದಲ್ಲಿ ಅಂದಾಜು ಮಂಜೂರಾದಮೇಲೆ ರೈತರಿಗೆ ಕೊಡತಕ್ಕ ಪರಿಹಾರ ಆಲೋಚನೆಯಲ್ಲಿದೆ ಎಂದು ಹೇಳುತ್ತೀರಿ ಉತ್ತರದಲ್ಲಿ, ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಅಕ್ಸೆಪ್ಟಿಷನ್ನಿಗೆ ತಕರಾರು ಮಾಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಹೀಗೆ ಕೆಲಸ ಪ್ರಾರಂಭ ಮಾಡಿದಮೇಲೆ ಈ ರೀತಿ ಅಡಚಣೆ ಬರುವುದಕ್ಕೆ ಕಾರಣ ಹೇಳಿದ್ದೀರಿ, ಏಕೆ ಈ ರೀತಿ ಆಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮುಂದಾಲೋಚನೆ ಇಲ್ಲದಿದ್ದುದರಿಂದಲ್ಲವೆ ಹೀಗಾದದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಈ ವರ್ಷ ಮಾಡಿದ್ದಲ್ಲ, ಕೆಲವು ವರ್ಷಗಳ ಹಿಂದೆ ಮಾಡಿದ್ದು. ಆಗಿನ ಸಂದರ್ಭವೇನಿತ್ತೋ ಹೇಳಲಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಶೇಕಡ 30 ಎಂದಿದೆ, ಇದಕ್ಕೆ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—90,961 ರೂಪಾಯಿಗಳು.

ಶ್ರೀ ಕೆ. ಪುಟ್ಟಸ್ವಾಮಿ.—ಆ ಹಣ ನಿರರ್ಥಕವಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಪುನಃ ಪ್ರಾರಂಭಮಾಡಬೇಕೆಂಬ ಆಶೆಯಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಕೆಲಸ ಎಷ್ಟುದಿನ ನಡೆದಿದೆ, ಪ್ರಾರಂಭವಾದದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್. ಈ ಸಂಬಂಧವಾಗಿ ಖೋತಾ ನಿರ್ಣಯ ಚರ್ಚೆಗೆ ಬಂದಾಗ ಜವಾಬು ಹೇಳಿದ್ದೇನೆ, ಅದರಲ್ಲಿ ಎಲ್ಲಾ ವಿವರಗಳನ್ನೂ ಕೊಟ್ಟಿದ್ದೇನೆ.

Construction of a bridge across the Kodihalla of Haralahalli Tank, Krishnarajapet Taluk.

Q.—500. Sri S. M. LINGAPPA (Krishnarajpet).—Will the Government be pleased to state :—

(a) whether they have received any petitions from the raiyats of the locality requesting for the construction of a bridge across the Kodihalla of Haralahalli Tank in Silanere Hobli of Krishnarajapet Taluk ;

(b) the steps undertaken by Government in this behalf ?

A.—Sri Kadidal MANJAPPA (Minister for Revenue and Public Works).—

(a) Yes.

(b) the proposal is under consideration.

ಶ್ರೀ ಎಸ್. ಎಂ. ಲಿಂಗಪ್ಪ.—ಇದು ಆಗಬೇಕೆಂದು ಆ ಗ್ರಾಮಗಳ ರೈತರು ಎಷ್ಟು ವರ್ಷಗಳಿಂದ ವಿನಂತಿ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರ್ಷಗಳಿಂದ.

ಶ್ರೀ ಎಸ್. ಎಂ. ಲಿಂಗಪ್ಪ.—ನಿಮಾರು ಎಷ್ಟು ವರ್ಷಗಳಿಂದ ಎಂದಿಟ್ಟುಕೊಳ್ಳಬಹುದು ?

Mr. SPEAKER.—Any other question ?

(No response)

Construction of kattu-kaluve to Srinivasa Sagar, Chikballapur Taluk.

Q.—511. Sri G. PAPANNA (Sidlaghatta-Chikballapur).—Will the Government be pleased to state:—

(*a*) whether any representations have been received by them praying for the construction of a 'kattu-kaluve' to facilitate the water from the wasteweir of Srinivasa Sagar, Chikballapur Taluk, to flow into some of the tanks of Darinaikanapalya and Nagaragere Hoblis of Goribidanur Taluk ;

(*b*) if so, whether any survey has been conducted in that respect ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes.

ಶ್ರೀ ಜಿ. ಪಾಪಣ್ಣ.—ಇದಕ್ಕೆ ಸರ್ವೆ ನಡೆಸಿದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ತಾರೀಖು, ವರ್ಷ ಗೊತ್ತಿಲ್ಲ. ಈ ಕೆಲಸವನ್ನು ತೆಗೆದುಕೊಳ್ಳುವುದು ಪ್ರಯೋಜನವಿಲ್ಲವೆಂದು ನಮ್ಮ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಜಿ. ಪಾಪಣ್ಣ.—ಕಾರಣವೇನು ?

Sri Kadidal MANJAPPA.—On the ground that there is no surplus water.

ಶ್ರೀ ಜಿ. ಪಾಪಣ್ಣ.—ಈ ಕೋಡಿಯ ನೀರೆಲ್ಲಾ ಮದರಾಸು ಪ್ರಾಂತ್ಯಕ್ಕೆ ಹೋಗುತ್ತಿದೆಯೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.